ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು ಯಾರನ್ನಾದರೂ ಸ್ಥಳಕ್ಕೆ ಕಳುಹಿಸಿ ನಾವು ಊರಿನೊಳಗೆ ಹೋಗುವುದಕ್ಕೆ ಆಗುವುದಿಲ್ಲ. ಸರ್ಕಾರದ ವತಿಯಿಂದ ಯಾರನ್ನಾದರೂ ಕಳಿಸಿ ಈಗ ಎಂ.ಡಿ. ಯವರು ಏನು ಒಪ್ಪಿಕೊಂಡಿದ್ದಾರೆ, ಅವರನ್ನು ಸಮಜಾಯಿಸಿಕೊಂಡು ಬರಲಿ. ದಯವಿಟ್ಟು ಆ ಭರವಸೆಯನ್ನಾದರೂ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಆಯಿತು. ಅದನ್ನು ಮಾಡೋಣ.

2. ದೇವನಹಳ್ಳಿ ಬಳಿ ನಡೆದ ದುರ್ಘಟನೆಯ ಬಗ್ಗೆ

† ಶ್ರೀ ಮುನಿನರಸಿಂಹಯ್ಯ (ದೇವನಹಳ್ಳಿ) : ಮಾನ್ಯ ಅಧ್ಯಕ್ಷರೇ, ನಾನು ಒಂದು ಸೂಚನೆಯನ್ನು ಕಳಿಸಿಕೊಟ್ಟಿದ್ದೆ. ನನ್ನ ಕ್ಷೇತ್ರದಲ್ಲಿ ನಡೆದ ಘಟನೆ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದಿರಿ. ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಒಂದು ದುರ್ಘಟನೆ ದೇವನಹಳ್ಳಿ ಕ್ಷೇತ್ರದ ಬಳಿ ನಡೆದಿದ್ದು ಎರಡು ಟೆಂಪೋಗಳು ಮುಖಾಮುಖಿ ಡಿಕ್ಕಿಯಾಗಿ 16 ಜನ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇದಕ್ಕೆ ಕಾರಣ, ರಾಜ್ಯ ರಸ್ತೆ ಸಾರಿಗೆಯವರು, ಸ್ವಲ್ಪ ಭಾಗ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್‌ನವರು ಮತ್ತು ಟ್ರಾನ್ಸ್‌ಪೋರ್ಟ್ ಕಮಿಷನರ್‌ರವರು ಎಲ್ಲರೂ ಇದರಲ್ಲಿ ಭಾಗಿಗಳಾಗಿರುತ್ತಾರೆ ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುತ್ತೇನೆ. ಈ ಒಂದು ಘಟನೆ ಸಂಭವಿಸಬೇಕಾದರೆ 11 ಜನರನ್ನು ತುಂಬಿ ಒಯ್ಯತಕ್ಕಂಥ ಟೆಂಪೋದಲ್ಲಿ 20 ರಿಂದ 25 ಜನರನ್ನು ತುಂಬಿಕೊಂಡು ಓಪ್ಪಿ ಚಾಲಕ. ಚಾಲನೆಯನ್ನು ಕೂಡ ಸಮರ್ಪಕವಾಗಿ ಮಾಡದೇ ಇರತಕ್ಕಂಥ ಸಂದರ್ಭದಲ್ಲಿ ಎದುರುಗಡೆಯಿಂದ ಬಂದಂಥ ಇನ್ನೊಂದು ಟೆಂಪೋಗೆ ಡಿಕ್ಕಿ ಹೊಡೆದುದ್ದರ ಪರಿಣಾಮವಾಗಿ 16 ಜನರು ಸ್ಥಳದಲ್ಲೇ ಮೃತಪಟ್ಟಿದ್ದು. ಈ ಒಂದು ಸ್ಥಳಕ್ಕೆ ನಮ್ಮ ರಾಜ್ಯದ ಹಿರಿಯ ಪೋಲೀಸ್ ಅಧಿಕಾರಿಗಳೂ, ಜಿಲ್ಲೆಯ ಪೋಲೀಸ್ ಅಧಿಕಾರಿಗಳೂ, ಎಲ್ಲರೂ ಕೂಡ ಭೇಟಿ ಕೊಟ್ಟಿದ್ದಾರೆ. ಅಲ್ಲಿ ನಡೆದಂಥ ಘಟನೆ ಸಂದರ್ಭದಲ್ಲಿ ಎಲ್ಲಾ ರೋಗಿಗಳನ್ನು, ಮೃತಪಟ್ಟವರನ್ನು, ಮತ್ತು ಕೈಕಾಲು ಮೂಳೆ ಮುರಿದುಕೊಂಡವರನ್ನು ನಾವು ಸಂಜಯಗಾಂಧಿ ಆಸ್ಪತ್ರೆಗೆ ಕೊಂಡೊಯ್ದಾಗ ಅಲ್ಲಿ ಶುಶ್ರೂಷೆ ಮಾಡುವುದಕ್ಕೆ ಕೂಡ ಸರಿಯಾದ ವ್ಯವಸ್ಥೆ ಇರಲಿಲ್ಲ.

ಅಲ್ಲಿ ಒಂದೊಂದು ಇಂಜೆಕ್ಷನ್ ಒಂದು ನೂರು ರೂಪಾಯಿ ಬೆಲೆ ಬಾಳುವಂಥಾದ್ದು ಎಂದು ಹೇಳಿ. ರೋಗಿಗಳನ್ನು ಕೂರಿಸಿ ನಮ್ಮಲ್ಲಿ ಇಂಜೆಕ್ಷನ್ ಇಲ್ಲವೆಂದು ಹೇಳುತ್ತಾರೆ. ಮತ್ತೆ ಎಕ್ಸರೇ ಮಾಡುವುದಕ್ಕೆ 110 ರೂಪಾಯಿ ಚಾರ್ಜ್ ಮಾಡಬೇಕು ಎನ್ನುವ ಉತ್ತರವನ್ನು ಕೊಡುತ್ತಾರೆ. ಈ ಸಂದರ್ಭದಲ್ಲಿ ಅಪಘಾತದಲ್ಲಿ ನೋವಾದವರಿಗೆ, ನಾವು ಶುಶ್ರೂಷೆ ಪಡೆಯುವುದಕ್ಕೆ ಬಹಳ ಕಷ್ಟವಾಗಿದೆ. ಈ ವಿಚಾರವಾಗಿ, ಈ ಸಂದರ್ಭದಲ್ಲಿ ಸರ್ಕಾರದವರು ಆಸ್ಪತ್ರೆ ಕಡೆ ಗಮನಹರಿಸಬೇಕಾಗುತ್ತದೆ. ರಸ್ತೆ ಸಾರಿಗೆ ಬಸ್ಸುಗಳ ಟಾಪ್ ಮೇಲೆ 10-12 ಜನಕುಳಿತುಕೊಂಡು ಪ್ರಯಾಣ ಮಾಡುವುದನ್ನು ಕಾಣುತ್ತಿದ್ದೇವೆ. ಇದೆ ರೀತಿ ಮುಂದುವರಿದರೆ, ಮುಂದೆ ಬರತಕ್ಕ ದಿವಸಗಳಲ್ಲಿ ಅನೇಕ ಅನಾಹುತಗಳು ಸಂಭವಿಸತಕ್ಕಂಥಾದ್ದನ್ನು ನೋಡಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಎಲ್ಲಾ ಕಡೆ, ರಸ್ತೆಸಾರಿಗೆ ಸಂಸ್ಥೆಯ ವ್ಯವಸ್ಥೆಯನ್ನು ನಾವು ಉತ್ತಮಪಡಿಸದೇ ಹೋದರೆ, ಮುಂದೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆಂಬ ಬಗ್ಗೆ ಈ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುತ್ತೇನೆ. ಇದರ ಜೊತೆಗೆ ನಗರ ಸಾರಿಗೆ ಇಲಾಖೆ ಅಂದರೆ, ಬಿ.ಟಿ.ಎಸ್. ನವರು ಕಳೆದ 20 ವರ್ಷಗಳಿಂದ ಸಿಟಿ ಕಾರ್ಪೋರೇಷನ್ ಲಿಮಿಟ್‌ನಿಂದ 22 ಕಿಲೋ ಮೀಟರ್ ರಸ್ತೆಯಲ್ಲಿ ಮಾತ್ರ ಬಿ.ಟಿ.ಎಸ್. ಓಡಿಸುತ್ತಿದ್ದಾರೆ. ಇದಕ್ಕೆ ಅವರು ಒಂದು ಕಾಯಿದೆಯನ್ನು ಇಟ್ಟುಕೊಂಡಿದ್ದಾರೆ. ಈಗಾಗಲೇ ನಗರ ಸುಮಾರು 10-15 ಕಿಲೋಮೀಟರ್ ಮುಂದಕ್ಕೆ ವಿಸ್ತರಣೆ ಆಗಿದ್ದು. ಅಭಿವೃದ್ಧಿಯಾಗಿರುವುದರಿಂದ. ಬಿ.ಟಿ.ಎಸ್. ವ್ಯವಸ್ಥೆಯನ್ನೂ ವಿಸ್ತರಿಸಬೇಕು....

ವೈಸ್ ಛೇರ್ಮನ್ : ನೀವು ಆಗಲೇ ಹೇಳಿದ್ದಕ್ಕೂ. ಈಗ ಹೇಳುವುದಕ್ಕೂ ಸಂಬಂಧ ಏನಿದೆ. ರಸ್ತೆನಾರಿಗೆ ಮೇಲೆ ಡಿಮ್ಯಾಂಡ್ ಬರುತ್ತದೆ. ಆಗ ವಿವರವಾಗಿ ಮಾತನಾಡಿ.....

ಶ್ರೀ ಮುನಿನರಸಿಂಹಯ್ಯ : ಹಾಲಿ ಇರತಕ್ಕ 22 ಕಿಲೋಮಿಟರ್ ಏನಿದೆ. ಅದನ್ನು ವಿಸ್ತಾರ ಮಾಡಿ. ಬಿ.ಟಿ.ಎಸ್. ಬಸ್ಸುಗಳನ್ನು ಹೆಚ್ಚಾಗಿ ಓಡಿಸತಕ್ಕ ವ್ಯವಸ್ಥೆ ಮಾಡಿದರೆ. ಅನೇಕ ಅನಾಹುತಗಳನ್ನು ತಪ್ಪಿಸಬಹುದು ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಈ ಅಪಘಾತ ಸರ್ಕಾರಿ ಬಸ್ಸಿನಲ್ಲಿ ಆಗಿ ಜನ ಸತ್ತಿದ್ದರೆ ಅಥವಾ ಖಾಸಗಿ ಬಸ್ಸಿನಲ್ಲಿ ಆಗಿ ಸತ್ತಿದ್ದರೆ. ಈ ದುರ್ಘಟನೆ ನಡೆದಿರತಕ್ಕ. ದುರ್ದೈವಿಗಳಿಗೆ ಹಣ ಸಿಗುತ್ತಿತ್ತು. ಇವತ್ತು ಅವರಿಗೆ ಒಂದು ರೂಪಾಯಿ ಕೂಡ ಸಿಗುವುದಿಲ್ಲ. ಈ ರೀತಿ ಅವರಿಗೆ ಹಣವೂ ಸಿಗದೇ. ಇವತ್ತು ಬಡವರು. ನಿರ್ಗತಿಕರು ಅಲ್ಲಿ ಸತ್ತು. ಮೂಳೆ ಮುರಿದುಕೊಂಡು ಆಸ್ಪತ್ರೆಯಲ್ಲಿ ನಾಯುತ್ತಿದ್ದಾರೆ. ಸರ್ಕಾರ ಇವರ ಕಡೆ ಗಮನಹರಿಸಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ

ಶ್ರೀ ಧರ್ಮಸಿಂಗ್. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯ ನಿನ್ನೆ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಸ್ಥಳಕ್ಕೆ ಎಲ್ಲಾ ಅಧಿಕಾರಿಗಳೂ ಹೋಗಿದ್ದಾರೆ. ತಾವು ಕೂಡ ಹೋಗಿದ್ದೀರಿ. ಇದು ಕಾರ್ಪೋರೇಷನ್‌ನವರಿಗೆ ಮತ್ತು ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಗೆ ಸಂಬಂಧಪಟ್ಟ ವಿಷಯ ಇದು. ಇದನ್ನು ಅವರ ಗಮನಕ್ಕೂ ತರುತ್ತಿದ್ದೇವೆ. ಅಲ್ಲಿ ಏನು ಅಪಘಾತವಾಗಿದೆ. ಅದಕ್ಕೆ ಬೇರೆ ರೀತಿಯಲ್ಲಿ ಪರಿಹಾರ ಕೊಡುವ ವಿಚಾರವನ್ನೂ ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ಸರ್ಕಾರ ಹೀವ್ರತರವಾದ ಗಮನ ಕೊಡುತ್ತದೆ.

ಶ್ರೀ ಮುನಿನರಸಿಂಹಯ್ಯ : ಪರಿಹಾರ ಕೊಡತಕ್ಕ ಕೆಲಸವನ್ನು ತಾವು ಆದಷ್ಟು ಜಾಗ್ರತೆ ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ನೀವು ಸಂಬಂಧಪಟ್ಟ ಶಾಸಕರಾಗಿದ್ದೀರಿ. ಸರ್ಕಾರದ ಗಮನಕ್ಕೆ ತರುವುದು ತಮ್ಮ ಕರ್ತವ್ಯವಾಗಿದೆ. ಇದು ಈಗಾಗಲೇ ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ತಾವು ಏನೇನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅಂಶಗಳನ್ನು ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ ಮತ್ತು ಈ ವಿಷಯವಾಗಿ ಸಾಗಿಗೆ ಸಚಿವರ ಜೊತೆಯಲ್ಲೂ ಸಮಾಲೋಚನೆ ನಾಡಿ. ಕಾರ್ಪೋರೇಷನ್ ಸಿಬ್ಬಂದಿಯವರ ಜೊತೆಯಲ್ಲೂ ಸಮಾಲೋಚನೆ ಮಾಡಿ. ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕೆ.ಜೆಬ್. ಹನುಮೇಗೌಡ : ನಾನು ಈ ದಿವಸ ಒಂದು ವಿಷಯವನ್ನು ಪ್ರಸ್ತಾಪ ಮಾಡಲು ನಿಂತಿದ್ದೇನೆ. ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ. ಇಲ್ಲದೇ ಹೋದರೆ ನಾಳೆ ನನಗೆ ಅವಕಾಶ ಕೊಡಿ.

ವೈಸ್ ಛೇರ್ಮನ್ : ನಾನು ಈಗ ಆ ಸಬ್ಜೆಕ್ಟ್ ದಾಟಿ ಬಂದಿದ್ದೇನೆ. ನಿಮಗೆ ನಾಳೆ ಅವಕಾಶ ಕೊಡಲಾಗುವುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾಗರಹೊಳೆಯಲ್ಲಿ ಬೆಂಕಿಬಿದ್ದ ಬಗ್ಗೆ. ಮಾನ್ಯ ಅರಣ್ಯ ಸಚಿವರು ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಈಗ ಅವರಿಂದ ಉತ್ತರ ಕೊಡಿಸಬೇಕು.

ವೈಸ್ ಛೇರ್ಮನ್ : ಈ ವಿಚಾರವಾಗಿ ಮಾನ್ಯ ಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆ.